''ಇಲ್ಲ. ಭಾರತದಲ್ಲೂ ನನ್ನವರೆಂಬವರು ಯಾರೂ ಇಲ್ಲ. ಈಳಂಗಾಗಿ ಹೋರಾಡಿ ಗೆಲ್ಲುತ್ತೇನೆ. ಹುತಾತ್ಮರಾಗಿ ಹೋದವರ ಆತ್ಮಗಳಿಗೆ ಶಾಂತಿ ನೀಡುತ್ತೇನೆ. ನಿಮ್ಮ ಆಶೀರ್ವಾದ ಬೇಕು.''

ವೇಳುಪಿಳ್ಳೈಯವರ ಮೀಸೆಯಡಿಯಲ್ಲಿ ಕಿರುನಗೆಯೊಂದು ಕಾಣಿಸಿತು. ''ನಾವು ಹೋರಾಟಗಾರರು ಆಶೀರ್ವಾದದಲ್ಲಿ ನಂಬಿಕೆ ಉಳ್ಳವರಲ್ಲ. ನಮ್ಮ ವಿಧಿ ನಮ್ಮ ಕೈಯಲ್ಲೇ ಇದೆ ಎಂದುಕೊಂಡು ಹೋರಾಡುವವರು, ದೃಢ ನಿರ್ಧಾರ ಮತ್ತು ಧೈರ್ಯದಲ್ಲಿ ಮಾತ್ರ ನಮಗೆ ನಂಬಿಕೆ. ನಮ್ಮ ವೈರಿಗಳಲ್ಲಿರುವುದಕ್ಕಿಂತ ಒಳ್ಳೆಯ ವೆಪನ್ಸ್ ನಮ್ಮಲ್ಲಿವೆ. ಅವನ್ನು ಎಲ್ಲಿ ಹೇಗೆ ಪ್ರಯೋಗಿಸಬೇಕೆಂದು ನಿಮಗೆ ಟ್ರೈನಿಂಗ್ ನೀಡಲಾಗುತ್ತದೆ.''

ನಾನು ಪುಂಗಿಯ ನಾದಕ್ಕೆ ತಲೆದೂಗುವ ನಾಗರ ಹಾವಿನಂತಾದೆ.

ವೇಲುಪಿಳ್ಳೈಯವರು ನಗುತ್ತಾ ನನ್ನನ್ನು ಬೀಳ್ಕೊಟ್ಟರು. ಮತ್ತೆ ನನ್ನ ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿನಲ್ಲೆ ನಡೆಸಿದರು. ಗಮ್ಯ ಸ್ಥಾನ ಬಂದಾಗ ನಾನು ಮರಗಳಿಂದ ಆವೃತ್ತವಾದ ಮಟ್ಟಸವಾದ ಜಾಗವೊಂದರಲ್ಲಿದ್ದೆ. ನನ್ನೆದುರು ಐವತ್ತು ಅರವತ್ತು ಮಂದಿ ಎ.ಕೆ. 47 ಹಿಡಿದು ನಿಂತಿದ್ದರು. ಒಬ್ಬ ಎತ್ತರದ ಮನುಷ್ಯ ಎಲ್ಲರಿಗಿಂತ ಎದುರಿದ್ದ.

''ನಾನು ಪೊಟ್ಟು ಅಮ್ಮಾನ್. ಇಂದಿನಿಂದ ನಿನಗೆ ಟ್ರೈನಿಂಗ್ ಶುರು. ಆರಂಭದ ಶಸ್ತ್ರಾಸ್ತ್ರ ಟ್ರೈನಿಂಗ್ ಇವರು ಕೊಡುತ್ತಾರೆ. ಕೊನೆಯಲ್ಲಿ ಪರೀಕ್ಷೆ ನಡೆಸುವುದು ನಾನು.''



ಪೊಟ್ಟು ಅಮ್ಮಾನ್! ಆ ಹೆಸರು ಕೇಳಿ ನಾನು ಬೆಚ್ಚಿ ಬಿದ್ದೆ. ಅವನು ಈಳಂನಲ್ಲಿ ವೇಲು ಪಿಳ್ಳೈಯ ಅನಂತರದ ಸ್ಥಾನ ಅಲಂಕರಿಸಿದವನು. ಅವನದು ಚಿರತೆಯ ಓಟ ಎಂದು ಕೇಳಿದ್ದೆ. ಅವನೆಷ್ಟೋ ಬಾರಿ ಹೊರದೇಶಗಳಿಗೆ ಹೋಗಿ ಈಳಂಗಾಗಿ ಹಣ ಮತ್ತು ವೆಪನ್ಸ್ ಸಂಗ್ರಹಿಸಿ ಬಂದವನೆಂದು ಪತ್ರಿಕೆಗಳಲ್ಲಿ ಓದಿದ್ದೆ. ನನ್ನ ಅದೃಷ್ಟವೆಂದೇ ಹೇಳಬೇಕು. ವೇಲುಪಿಳ್ಳೈ ಮತ್ತು ಪೊಟ್ಟು ಅಮ್ಮಾನ್ ಸಾಮಾನ್ಯ ತಮಿಳರಿಗೆ ಕಾಣಸಿಗುವವರಲ್ಲ. 'ನನ್ನವರ ಕ್ರೂರ ಹತ್ಯೆಗೆ ಪ್ರತೀಕಾರ ತೀರಿಸುವ ಸಮಯ ಸನ್ನಿಹಿತವಾಗುತ್ತಿದೆ' ಎಂದು ಮನಸ್ಸಿನಲ್ಲೇ ಅಂದುಕೊಂಡೆ.

"ಮುಂದೇನಾಯಿತು ಅಜ್ಜಾ?"

"ತರಬೇತಿ ಆರಂಭವಾಯಿತು. ಆ ಬಾರಿಯ ಟ್ರೈನಿಂಗ್ ಪಡೆದವರ ಸಂಖ್ಯೆ ಒಂದು ನೂರ ಇಪ್ಪತ್ತು. ನಾವು ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು ಮೂವತ್ತು ಕಿಲೋ ಭಾರದ ಯುದ್ಧ ಸಲಕರಣೆಗಳನ್ನು ಬೆನ್ನಿಗೆ ಕಟ್ಟಿ